ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct,¸À 2022, Pp 1-9.
©*IIMRD*, Mysuru
IIMRD JOURNALS

www.iimrd.com

# ದಲಿತ/ಬಂಡಾಯ ಕಾಲಘಟ್ಟದ ಆಯ್ದ ಖಂಡಕಾವ್ಯಗಳಲ್ಲಿ ಮಹಿಳಾ ಚಿತ್ರಣ

**ಚಿಕ್ಕಣ್ಣ ಬಿ. ಎಸ್***

*ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬ್ಯಾಡಗಿ ಹಾಗೂ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***ಸಾರಾಂಶ: (Abstract)***

*ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಬಗೆಗೆ ಪ್ರಾಚೀನ ಕಾಲದಿಂದ ಆಧುನಿಕ ಕಾಲಘಟ್ಟದವರೆಗೂ ಅನೇಕ ಮೂಢನಂಬಿಕೆಗಳಿವೆ. ದೇವತೆಯೆಂದು ಪೂಜನೀಯವಾಗಿ ಕಾಣುವ ದೇಶದಲ್ಲಿ ಒಂದು ವಸ್ತುವನ್ನಾಗಿ ಅವಳನ್ನು ಪರಿಗಣಿಸಲಾಗಿದೆ. ಹಿಂದಿನ ಕಾಲದಲ್ಲಿ ಮಹಿಳಾ ಬದುಕು ಶೋಚನೀಯವಾಗಿದ್ದರೆ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಭ್ರೂಣಹತ್ಯೆಯ ಮೂಲಕ ಮೊಳಕೆಯೊಡೆಯುವ ಮುನ್ನವೇ ನಾಶಪಡಿಸಲಾಗುತ್ತದೆ. ಲಿಂಗಭೇದ ಪ್ರಕ್ರಿಯೆ ಪ್ರಕೃತಿ ಸಹಜವಾದುದಲ್ಲ, ಪುರುಷ ಪ್ರಧಾನ ವ್ಯವಸ್ಥೆ ನಿರ್ಮಿಸಿದೆ. ಜಾತಿವ್ಯವಸ್ಥೆ ಮತ್ತು ವರ್ಗವ್ಯವಸ್ಥೆ ಬೆಳೆದಂತೆಲ್ಲಾ ಹೆಣ್ಣಿನ ಶೋಷಣೆ ಹೆಚ್ಚಾಗುತ್ತಾ ಬಂದಿದೆ. ಹತ್ತಾರು ಸಮಸ್ಯೆಗಳ ನಡುವೆಯೂ ಹೆಣ್ಣಿನ ಬಗೆಗೆ ಮಧ್ಯಕಾಲೀನ ಯುಗದಲ್ಲಿ ಶರಣರ ಮೂಲಕ ಆಧುನಿಕ ದಲಿತ/ಬಂಡಾಯ ಕಾಲಘಟ್ಟದಲ್ಲಿ ಹೆಣ್ಣನ್ನು ಮನುಷ್ಯಳನ್ನಾಗಿ ಪರಿಭಾವಿಸಿದ್ದಾರೆ. ಲಿಂಗಭೇದವಿಲ್ಲದೆ ಸಮಾನತೆಯಿಂದ ಕಂಡಿದ್ದಾರೆ.*

***ಮುಖ್ಯಪದಗಳು (Keywords):*** *ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಖಂಡಕಾವ್ಯ, ಮಹಿಳೆ.*

## ಪೀಠಿಕೆ

ಭಾರತಕ್ಕೆ ಹೆಣ್ಣು ಗಂಡಿನ ಭೇದವನ್ನು ಮೊದಲು ಅಳಿಸಿ ಅರ್ಧನಾರೀಶ್ವರ ಎನಿಸಿಕೊಂಡವನು ಪುರಾಣದ ಶಿವ. ಈ ಪರಿಕಲ್ಪನೆ ವೈಜ್ಞಾನಿಕವಾದರೂ ಎಲ್ಲಾ ಕಾಲದಲ್ಲಿ ಇದನ್ನು ಕಾಣಲಾಗಲಿಲ್ಲ. ಹನ್ನೆರಡನೇ ಶತಮಾನದ ಶಿವಶರಣರು ಇನ್ನೂ ಮುಂದೆ ಹೋಗಿ 'ಶರಣ ಸತಿ–ಲಿಂಗ ಪತಿ' ತತ್ವವನ್ನು ಅಳವಡಿಸಿಕೊಂಡರು. ಶರಣಸತಿ ಎಂಬ ಪದ ಬಹು ಅರ್ಥವನ್ನೊಳಗೊಂಡಿದೆ. ಹೆಣ್ಣು ದುರ್ಬಲಳು ಎಂಬ ಸಾಂಪ್ರದಾಯಿಕ ವ್ಯವಸ್ಥೆಯ ಸ್ಥಾಪಿತ ನಿಲುವುಗಳನ್ನು ತಿರಸ್ಕರಿಸುವುದರ ಮೂಲಕ ಸಮಾನತೆಯ ನೆಲೆಗಳನ್ನು ರೂಢಿಸಿಕೊಂಡರು.

ಕನ್ನಡದ ಹಿಂದಿನ ಕಾವ್ಯ ಪರಂಪರೆಯಲ್ಲಿ ಹೆಣ್ಣನ್ನು ಕೇವಲ ಮಾಂಸದ ಮುದ್ದೆಯಾಗಿ ನಿಲ್ಲಿಸಿದರೆ, ದಲಿತ/ಬಂಡಾಯ ಕಾವ್ಯದಲ್ಲಿ ಸ್ತ್ರೀಯನ್ನು ಒಂದು ಕ್ರಿಯಾತ್ಮಕ ಶಕ್ತಿಯಾಗಿ ಕಾಣಲಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರ ಮತ್ತು ಹೆಣ್ಣಿನ ಸ್ಥಾನಮಾನಗಳು ಹತ್ತಿಕ್ಕಲ್ಪಟ್ಟಿವೆ. ಆದುದರಿಂದ ಹಿಂದೆ ಆಗಿರುವ

*Please cite this article as: ಚಿಕ್ಕಣ್ಣ ಬಿ. ಎಸ್.* (2022). ದಲಿತ/ಬಂಡಾಯ ಕಾಲಘಟ್ಟದ ಆಯ್ದ ಖಂಡಕಾವ್ಯಗಳಲ್ಲಿ ಮಹಿಳಾ ಚಿತ್ರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 1–9*

ಪ್ರಮಾದವನ್ನು ತಿದ್ದಿಕೊಳ್ಳಲು ದಲಿತರು ಸಮಾಜದಲ್ಲಿ ಮನುಷ್ಯರಾಗಿ ಬದುಕಲು, ಹೆಣ್ಣಿನ ಸ್ಥಾನಮಾನಗಳಿಗೆ ಆದ್ಯತೆ ನೀಡುವುದನ್ನು ದಲಿತ/ಬಂಡಾಯ ಸಾಹಿತ್ಯ ಮನಗಂಡಿತು. ಲಿಂಗ ಅಸಮಾನತೆ ಹೋಗಲಾಡಿಸಿ ಪುರುಷನಂತೆಯೇ ಹೆಣ್ಣನ್ನೂ ಪರಿಗಣಿಸಿ ಸಮಾಜದೊಂದಿಗೆ ಕರೆದುಕೊಂಡು ಹೋದರೆ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂಬುದನ್ನು ಈ ಸಾಹಿತ್ಯವಲಯ ಅರ್ಥಮಾಡಿಕೊಂಡಿತು.

ಹಿಂದಿನ ಕಾಲದಿಂದಲೂ ದಲಿತರು ಮತ್ತು ಸ್ತ್ರೀಯರಿಗೆ ಅಲಭ್ಯವಾಗಿದ್ದ ಶಿಕ್ಷಣ ಉದ್ಯೋಗ ಮೀಸಲಾತಿ ಮುಂತಾದ ಅವಕಾಶಗಳು ಶೋಷಿತರಿಗೆ ಹೇಗೆ ಚಾಲಕ ಶಕ್ತಿಯಾಯಿತೋ ಅಂತೆಯೇ ಸ್ತ್ರೀಯರ ಪಾಲಿಗೂ ಸಂಕೋಲೆಗಳಿಂದ ಬಿಡುಗಡೆಗೆ ಹೊಸದಾರಿಯಾಗಿ ಕಂಡಿತು. ತಮ್ಮ ಸಮಾಜದ ವಿಕಸನಕ್ಕೆ ಮಾರ್ಗವನ್ನು ಕಂಡುಕೊಂಡು ತಮಗಾಗಿರುವ ನೋವು ಅನ್ಯಾಯ ಅವಕಾಶ ವಂಚನೆಗಳನ್ನು ಕುರಿತು ತಮ್ಮ ತಮ್ಮ ಕಾವ್ಯಗಳಲ್ಲಿ ಮರುಪರಿಶೀಲನೆ ಮಾಡತೊಡಗಿದರು. ಸಮಾಜದ ಜಡ ಸಂಪ್ರದಾಯಗಳು, ಜಾತಿ–ಧರ್ಮಗಳು, ಪುರುಷ ಪ್ರಾಧಾನ್ಯತೆ ಹೇಗೆ ತಮ್ಮನ್ನು ಅವರ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡರು ಎಂಬುದನ್ನು ಅರಿತುಕೊಂಡ ಮಹಿಳಾ ಬರಹಗಾರರು ಅದಕ್ಕೆ ಪ್ರತಿಕ್ರಿಯೆ ಹಾಗೂ ಪ್ರತಿರೋಧವನ್ನು ತಮ್ಮ ತಮ್ಮ ಕಾವ್ಯಗಳ ಮೂಲಕ ವ್ಯಕ್ತಪಡಿಸಿದರು. ಅದೇ ರೀತಿಯಲ್ಲಿ ಕನ್ನಡದ ಸಾಹಿತ್ಯವನ್ನು ಹೊಸದಿಕ್ಕಿಗೆ ಕೊಂಡೊಯ್ದ ದಲಿತ/ಬಂಡಾಯ ಚಳುವಳಿಗಳು ನೊಂದ ಮಹಿಳೆಯರ ದನಿಗಳಿಗೆ ಹೋರಾಟದ ಸ್ವರೂಪವನ್ನು ಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು. ಸತಿಪದ್ಧತಿ, ವರದಕ್ಷಿಣೆ ಸಾವು, ಭ್ರೂಣಹತ್ಯೆ, ಲೈಂಗಿಕ ದೌರ್ಜನ್ಯ ಮತ್ತು ಶ್ರಮಿಕ ಮಹಿಳೆಯರ ಬವಣೆಗಳನ್ನು ಕುರಿತು ಮಹಿಳೆಯರ ಬದುಕಿನ ಅನೇಕ ಮಜಲುಗಳನ್ನು ಕಾವ್ಯಗಳಲ್ಲಿ ಚಿತ್ರಿಸಿದರು.

ಮಹಿಳಾ ಸಂವೇದನೆಯ ಬಹುಭಾಗದ ವಸ್ತು ಎಲ್ಲಾ ರೀತಿಯ ಪುರುಷ ಪ್ರಧಾನ, ಪಿತೃಪ್ರಧಾನ ವ್ಯವಸ್ತೆಯ ವಿರುದ್ಧ ಸಾರಿದ ಪ್ರತಿಭಟನೆಯ ಅಭಿವ್ಯಕ್ತಿಯಾಗಿದೆ. ಪರುಷ ಪ್ರಧಾನ ವ್ಯವಸ್ಥೆಯನ್ನು ಪ್ರಾತಿನಿಧಿಕವಾಗಿ ಸಂಕೇತಿಸುವ ತಂದೆ, ಪ್ರಿಯಕರ, ಗಂಡ, ಮಗ, ರಾಜಕೀಯ ನೇತಾರರು, ಧರ್ಮಗುರುಗಳು ಒಟ್ಟಾರೆ ಪುರುಷರು ಮಹಿಳೆಯರ ಕಾವ್ಯದಲ್ಲಿ ತೀವ್ರವಾದ ಪರೀಕ್ಷೆಗೆ ಒಳಪಟ್ಟಿದ್ದಾರೆ.

ಚೆನ್ನಣ್ಣ ವಾಲೀಕಾರರು ಪ್ರಮುಖ ಬಂಡಾಯ ಕವಿ ಅವರ ‘ಹಾಡಕ್ಕಿ’ ಖಂಡಕಾವ್ಯದಲ್ಲಿ ಅನೇಕ ಮಹಿಳೆಯರ ಚಿತ್ರಣವಿದೆ. ಖಂಡಕಾವ್ಯದ ತುಂಬ ಮಹಿಳಾ ಸಂವೇದನೆ ಹರಳುಗಟ್ಟಿದೆ. ಕೆಳಗೇರಿಯ ಸಾಬಕಾಯಿ ಎಂಬ ಹೆಂಗಸು ತನ್ನ ಗಂಡನ ಮರಣದ ನಂತರ ಮೈದುನರಿಂದ ಮನೆಯಿಯಿಂದ ಹೊರಹಾಕಲ್ಪಟ್ಟವಳು. ಸ್ವಾಭಿಮಾನ ಅವಳಲ್ಲಿ ಪುಟಿದಿದ್ದು ಏಕಾಂಗಿಯಾಗಿ ಬದುಕಿ ಮೆಚ್ಚುಗೆ ಗಳಿಸಿದ್ದಳು. ಸೂಲಗಿತ್ತಿಯಾಗಿದ್ದ ಅವಳ ಸೇವಾ ನೈಪುಣ್ಯತೆಯನ್ನು ಊರಿನವರು ಮನಗಂಡಿದ್ದರು. ಆಕೆ ಸತ್ತು ಮೂರುನಾಲ್ಕು ತಲೆಮಾರು ಕಳೆದರೂ ಅವಳನ್ನು ಊರಿನಲ್ಲಿ ಸ್ಮರಿಸುತ್ತಾರೆ. ಹುಟ್ಟಿದರೆ ಅಂತಹ ಹೆಣ್ಣು ಹುಟ್ಟಬೇಕು ಎಂದು ಕೊಂಡಾಡುತ್ತಾರೆ.

ಮೇಲ್ಜಾತಿಯವರು ಪ್ರತಿಯೊಂದು ಊರಿನಲ್ಲೂ ಬಡವರಾದ ಹೆಣ್ಣುಮಕ್ಕಳನ್ನು ಬಸವಿ ಬಿಡಿಸುತ್ತಾರೆ. ಸುಂದರವಾಗಿ ಕಾಣುವ ಆ ಹೆಣ್ಣುಮಕ್ಕಳು ಮುಂದೊಂದು ದಿನ ಊರಿನ ಮುಖಂಡರ ಸ್ವತ್ತಾಗಿ ಮಾಡಿಕೊಳ್ಳುತ್ತಿದ್ದ ಬಗ್ಗೆ ಕವಿ ಪದಕಟ್ಟಿ ಹಾಡುತ್ತಾರೆ. ಮೀನುಗಾರ ನನ್ಯಾನ ತಂಗಿ ಮೀನು ಮಾರಿ ಮನೆಗೆ ಬರುವಾಗ ಆಲೂರ ಸಾಹುಕಾರ ಸಂಗಪ್ಪನ ಕಾಮತೃಷೆಗೆ ಬಲಿಯಾಗಿ, ಮಾನವಂತಳಾದ ಅವಳು

ಪ್ರಾಣಬಿಟ್ಟಳು. ಅಗಸರ ಸಾಬವ್ವನಿಗೆ ಮಕ್ಕಳಾಗಲಿಲ್ಲವೆಂದು ಅವಳ ಗಂಡ ಮತ್ತೊಬ್ಬ ಸವತಿಯನ್ನು ಕರೆದುಕೊಂಡು ಬಂದಿದ್ದನು. ಆದರೂ ಸಾಬವ್ವ ಕೊರಗಲಿಲ್ಲ. ಮನೆಯ ಸುದ್ದಿ ಬೀದಿ ಪಾಲಾಗುವುದು ಬೇಡವೆಂದು ಸಹಿಸಿಕೊಂಡಳು. ಆ ಊರಿನಲ್ಲಿ ಒಂದು ದಿನ ನಡೆದ ನಾಟಕದಲ್ಲಿ ಬಂಜೆ ಪಾತ್ರವನ್ನು ಮಾಡೆಂದು ಊರಿನವರು ಹಠಹಿಡಿದರು. ಮಕ್ಕಳಿಲ್ಲದ ಹೆಣ್ಣಿಗೆ ಆಗುವ ಅವಮಾನವನ್ನು ಸಹಿಸದ ಸಾಬವ್ವ ಬಂಜೆತನದ ಹೀನಜನ್ಮ ಬೇಡವೆಂದು ಬಾವಿಗೆ ಹಾರಿ ಸತ್ತಳು. ಹೀಗೆ ಜ್ಯಾಪೂರದಲ್ಲಿ ಹೆಣ್ಣುಮಕ್ಕಳು ಒಬ್ಬೊಬ್ಬರೂ ಒಂದೊಂದು ರೀತಿಯ ಶೋಷಣೆಗೆ ಗುರಿಯಾಗಿದ್ದಾರೆ. ಬಗ್ಗೇರ ಕಾಸವ್ವ, ಹಟ್ಟೇರ ನಿಂಗಪ್ಪನ ಮಗಳು, ಗೀರಾಣ್ಣ ಯಾಳೆಕ್ಕ ಮುಂತಾದವರ ದುರಂತ ಬದುಕಿನ ಹಲವು ಮುಖಗಳನ್ನು ಈ ಖಂಡಕಾವ್ಯದಲ್ಲಿ ಕಾಣಿಸುತ್ತಾರೆ

'ಮಾದಾರ ಸಾಬವ್ವನ ಘೋರಿಪದ' ಖಂಡಕಾವ್ಯದಲ್ಲಿ ಅಸಹಾಯಕ ಹೆಣ್ಣು ಹಣವುಳ್ಳವರ ಕುತಂತ್ರಕ್ಕೆ ಬಲಿಯಾದ ಕತೆಯನ್ನು ಹಾಡಾಗಿಸಿದ್ದಾರೆ. ಸ್ವಾರ್ಥಿ ಗಂಡಸರು ಹೆಣ್ಣಿನ ಬದುಕಿಗೆ ಚಿತೆಯಿಟ್ಟ ಪ್ರಸಂಗವನ್ನು ತಾವು ಹಾಡುತ್ತಿರುವುದಾಗಿ ತಿಳಿಸುತ್ತಾರೆ. ಹೆಣ್ಣು ಎಂದರೆ ಐಶ್ವರ್ಯ, ಸಂಪತ್ತು, ಶೃಂಗಾರ ಹೀಗೆ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಾರೆ. ಒಳಗೆ ತುಳಿಯುತ್ತಿದ್ದಾರೆ. ಕವಿ ಹೇಳುತ್ತಿರುವುದು ಮಾದರ ಸಾಬವ್ವನ ಕತೆಯಾದರೂ ನೋವುಂಡ ನೂರಾರು ಜೀವಗಳ ವ್ಯಥೆಯು ತಳುಕುಹಾಕಿಕೊಂಡಿದೆ. ಶೋಷಿತ ಸಮುದಾಯದ ಹೆಣು ಮಕ್ಕಳು ಮರ್ಯಾದೆಗೆ ಬದುಕಿನ ಸೌಭಾಗ್ಯ ಕಳೆದುಕೊಂಡವರೆ ಹೆಚ್ಚು. ಹಳ್ಳಿಜನರ ಬಾಯಲ್ಲಿ ಮಾದರ ಸಾಬವ್ವನ ಕತೆಯನ್ನು ಕೇಳುತ್ತಾ ಸಂಕಟದಿಂದ ಈ ಖಂಡಕಾವ್ಯ ಬರೆದಿರುವುದಾಗಿ ಹೇಳುತ್ತಾರೆ.

ಬಾಲ್ಯವಿವಾಹ ಆಗಿದ್ದ ಸಾಬವ್ವ ದೊಡ್ಡವಳು ಆಗುವವರೆಗೆ ತವರುಮನೆಯಲ್ಲೇ ಇರಲಿ ಎಂದು ತೀರ್ಮಾನ ಮಾಡಿದ್ದರು. ಜೀವನೋಪಾಯಕ್ಕಾಗಿ ತಾಯಿ ಕಲ್ಲವ್ವ, ಮಗಳೊಂದಿಗೆ ಗೌಡರ ಮನೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಒಂದು ಮದ್ಯರಾತ್ರಿ ಕಲ್ಲವ್ವನ ಗುಡಿಸಲಿಗೆ ಬಂದ ಸಿದ್ದರಾಮಗೌಡ ತನ್ನ ಆಣತಿಯಂತೆ ನಡೆದುಕೊಳ್ಳದಿದ್ದರೆ ಗುಡಿಸಲಿಗೆ ಬೆಂಕಿಹಾಕುವುದಾಗಿ ಹೆದರಿಸಿದನು. ಊರಿನಲ್ಲಿ ಗೌಡನೆಂದರೆ ಸರ್ಕಾರವಿದ್ದಂತೆ ಎಂಬುದನ್ನು ಮನಗಂಡ ತಾಯಿಮಗಳು ವಿರೋಧ ವ್ಯಕ್ತಪಡಿಸಲಿಲ್ಲ. ಮೇಲ್ಜಾತಿ ಜನರ ಸಲುವಾಗಿ ದೇವರು ತಮಗೆ ಹುಟ್ಟಿಸಿದ್ದಾನೆ ಎಂದು ಸಾಬವ್ವ ತಿಳಿದ ಸಾಬವ್ವ ತನ್ನ ಹಣೆಬರಹ, ವಿಧಿಯಮ್ಮ ಸರಿಯಾಗಿ ಬರೆದಿಲ್ಲವೆಂದು ಹಿಡಿಶಾಪ ಹಾಕುತ್ತಾಳೆ.

ಸಾಬವ್ವ ತಾನು ಗಂಡನ ಮನೆಗೆ ಹೋಗುವ ಸಂಭ್ರಮದಲ್ಲಿದ್ದರೂ ಸಿದ್ದರಾಮಗೌಡನ ಗುಂಪು ಸಾಬವ್ವನ ಗಂಡನನ್ನು ಹೊಡೆದು ಸಾಯಿಸಿದರು. ಅದೇ ಕೊರಗಿನಲ್ಲಿ ಕಲ್ಲವ್ವ ಗತಿಸಿ ಸಾಬವ್ವ ಒಬ್ಬಂಟಿಯಾದಳು. ತಂದೆ ತಾಯಿ ಗಂಡನಮನೆ ಈಗ ಸಾಬವ್ವನಿಗೆ ಇಲ್ಲದಾಯಿತು. ಗೌಡನೇ ತನಗೆ ಆಧಾರವೆಂದುಕೊಂಡಳು. ಸಿದ್ದರಾಮಗೌಡನನ್ನು ಬೇಡರು ಊರ ಹೆಬ್ಬಾಗಿಲಿನಲ್ಲಿ ಕೊಂದ ನಂತರ ಈಗ ಸಾಬವ್ವಳಿಗೆ ಯಾರೂ ತನ್ನವರೆಂದು ಇಲ್ಲದಾಯಿತು. ಉಣ್ಣಲು, ಉಡಲು, ತೊಡಲು ಎಲ್ಲದಕ್ಕೂ ಸಮಸ್ಯೆ. ಸಿದ್ದರಾಮಗೌಡ ಕಟ್ಟಿಸಿ ಕೊಟ್ಟ ಮನೆಯನ್ನು ಬಿಟ್ಟು ಹಿಂದೆ ಇದ್ದ ತಮ್ಮ ಗುಡಿಸಲಿಗೆ ವಾಪಸ್ಸಾದಳು.

ಬಾಂಬೆಯಿಂದ ಬಂದ ಮಾದರದೌಲಪ್ಪ ಸಾಬವ್ವಳೊಂದಿಗೆ ಸಲುಗೆ ಬೆಳಸಿದ. ಅವಳನ್ನು ಮರಿಯಮ್ಮನ ಗುಡಿಯಲ್ಲಿ ತಾಳಿಕಟ್ಟಿ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡನು. ಸಾಬವ್ವಳ ಒಂಟಿತನಕ್ಕೆ

ಬದುಕು ಸಿಕ್ಕಿತು ಎಂದು ಊರಿನ ಜನ ಹರಸಿದರು. ಇವರಿಬ್ಬರೂ ಶಹಬಾದ್‌ನಲ್ಲಿ ರೈಲು ಹತ್ತಿ ಬಾಂಬೆ ಸ್ಟೇಷನ್ನಿನಲ್ಲಿ ಇಳಿದರು. ಕೇಳುವ ಜನರಿಗೆ ತನ್ನ ಹೆಂಡತಿ ಎಂದು ಹೇಳುತ್ತಿದ್ದವನು, ಕಾಮಾಟಿಪುರಕ್ಕೆ ಅವಳನ್ನು ಕರೆತಂದು ಅಲ್ಲಿ ತಂಗಿದ್ದರು. ಮುಂಜಾನೆ ಎದ್ದು ನೋಡಿದರೆ ದೌಲಪ್ಪ ಅವಳೊಬ್ಬಳನ್ನೆ ಬಿಟ್ಟು ಹೋಗಿದ್ದನು. ಅಲ್ಲಿನ ವಾತಾವರಣ ಹೆಂಗಸರ ನಡವಳಿಕೆ ಗಮನಿಸಿದ ಸಾಬಕ್ಕಳಿಗೆ ಅದೊಂದು ವೇಶ್ಯಾವಾಟಿಕೆಯ ಕೂಪವೆಂದು ತಿಳಿಯಿತು. ಊಟ ಉಪಚಾರವನ್ನು ಬಿಟ್ಟ ಸಾಬವ್ವ ತನ್ನ ಬದುಕು ಎಲ್ಲಿಂದ ಶುರುವಾಗಿ ಎಲ್ಲಿಗೆ ಬಂದಿತೆಂದು ಕನಲುವಳು. ಅದೇ ವ್ಯಥೆಯಲ್ಲಿ ತನ್ನನ್ನು ವೇಶ್ಯಾಗೃಹಕ್ಕೆ ಮಾರಾಟಮಾಡಿರುವ ದೌಲಪ್ಪನನ್ನು ಶಪಿಸುವಳು. ತನ್ನ ಹಾಗೆ ದೌಲಪ್ಪನ ಚಿತಾವಣೆಗೆ ಹಲವು ಹೆಣ್ಣು ಮಕ್ಕಳು ಬಲಿಯಾಗಿರುವುದು ಸಾಬವ್ವಳಿಗೆ ಅರಿವಾಯಿತು. ಊಟ ತಿಂಡಿ ಬಿಟ್ಟು ನೆಲಹಿಡಿದ ಸಾಬವ್ವಳ ಬಳಿಗೆ ಬರುವ ಗಿರಾಕಿಗಳನ್ನು ಹೊಡೆದು ಕಳಿಸುತ್ತಾಳೆ.

ಮನೋವ್ಯಾಕುಲತೆಗೆ ಒಳಗಾದ ಆಕೆಗೆ ತನ್ನ ತಂದೆ ಕಣ್ಣಮುಂದೆ ಬಂದಹಾಗೆ, ಕೊಟ್ಟಿಗೆ ಕಸವನ್ನು ಎತ್ತಿ ತನ್ನನ್ನು ಸಾಕಿದ ತಾಯಿ, ತಾನು ಮೈನೆರೆದಾಗ ಜಿಟಿಜಿಟಿಮಳೆಯಲ್ಲಿ ಗೌಡ ಬಂದು ಎಸಗಿದ ಕ್ರೌರ್ಯ, ಗೌಡನ ಆಳುಗಳು ಗಂಡನನ್ನು ಹೊಡೆದು ಸಾಯಿಸಿದ್ದು, ಊರುಕೇರಿಯರು ಆಳುಗಳಿಗೆ ನ್ಯಾಯ ಪಂಚಾಯಿತಿಗೆ ತನ್ನಿಂದ ಹೇಳಿಸಲಿಕ್ಕೆ ಜನರು ಬರುತ್ತಿದ್ದುದು ನೆನೆಯುತ್ತಾಳೆ. ಸಿದ್ದರಾಮಗೌಡ, ತನ್ನ ಗುಡಿಸಲು, ದೌಲಪ್ಪ ಮರಿಯಮ್ಮನ ಗುಡಿಯಲ್ಲಿ ತನಗೆ ತಾಳಿ ಕಟ್ಟಿ ಬಾಂಬೆಗೆ ಕರೆತಂದಿದ್ದು ನೆನೆದು ಅಳುತ್ತಾಳೆ. ಊರಿಗೆ ಹೋಗುವ ಯೋಚನೆಯನ್ನೂ ಮಾಡುವ ಹಾಗಿಲ್ಲ. ತಾನೀಗ ಬೇರೆಯವರಿಗೆ ಬಿಕರಿಯಾದ ಮಾರಾಟದ ವಸ್ತುವಾಗಿದ್ದೇನೆ. ಎಂದು ನರಳುತ್ತಾಳೆ. ಸಾಬವ್ವನಂತಹ ಅಸಹಾಯಕರು ದೇಶದ ತುಂಬಾಸಾಕಷ್ಟು ಜನರಿದ್ದಾರೆ. ಅವರ ಕಷ್ಟವನ್ನು ಎಷ್ಟೆಂದು ಹಾಡಲಿ ತಾಯಂದಿರೆ. 'ಧರ್ಮದ ಹೆಸರು ಹೇಳಿ, ಶಾಸ್ತ್ರದ ಹೆಸರು ಹೇಳಿ ಹೆಣ್ಣನ್ನು ಕಲ್ಲಾಗಿ' ಮಾಡಿದ್ದಾರೆ. ಊರಿನ ಕೆಲವರು ಗುಡಿಸಲ ಮೇಲೆ ಕತೆಗಳ ಕಟ್ಟಿದ್ದಾರೆ. ಬಾಂಬೆಯಲ್ಲಿ ಮಾದರ ಸಾಬವ್ವ ಅಳುವುದನ್ನು ಕೇಳಿದ್ದೇವೆ, ಪೋಲೀಸ್‌ರೈಡ್ ಆದಾಗ ಅಳುವುದನ್ನು ಕೇಳಿದ್ದೇವೆ ಎನ್ನುತ್ತಾರೆ. ದೆವ್ವವಾದ ಸಿದ್ದರಾಮಗೌಡ ಗುಡಿಸಲ ಕಾಯುತ್ತಿದ್ದಾನೆ. ಮಾದರ ಮಲ್ಲಪ್ಪ, ಕಲ್ಲವ್ವ ಸೇರಿಕೊಂಡು ಊರಿಗೆ ಬರುತ್ತಾರೆ ಎಂದು ಹಾಡುತ್ತಾರೆ. ಗುಡಿಸಲ ಸುತ್ತಮುತ್ತ ಮನೆಗಳು ಎದ್ದಿವೆ ಗುಡಿಸಲು ಮಾತ್ರ ಹಾಗೇ ಇದೆ. ಗುಡಿಸಲ ಜಾಗವನ್ನು ಯಾರಾದರೂ ವಶಪಡಿಸಿಕೊಂಡರೆ ಸಾಬವ್ವ ಕಾಡುತ್ತಾಳೆ ಎಂದು ಜನ ನಂಬಿದ್ದಾರೆ. ರಾತ್ರಿಯಲ್ಲಿ ಭೂಮಿಗೆ ಕಿವಿಕೊಟ್ಟರೆ ಅಲ್ಲಿ ಸಾಬವ್ವ ಅಳುವುದನ್ನು ಕೇಳುತ್ತೇವೆ ಎನ್ನುತ್ತಾರೆ. ಅಮಾವಾಸ್ಯೆ ರಾತ್ರಿಯಲ್ಲಿ ಮಲ್ಲಪ್ಪ, ಕಲ್ಲವ್ವ, ಸಿದ್ದರಾಮಗೌಡ, ಸಾಬವ್ವ, ಸಾಬವ್ವಳಗಂಡ, ಬಾಂಬೆಯ ದೌಲಪ್ಪ ಅವರೆಲ್ಲರೂ ಕಲೆಯುತ್ತಾರೆಂದು ಊರು ಮಾತನಾಡಿಕೊಳ್ಳುತ್ತದೆ. ತಾಯಂದಿರೆ ಸಾಬವ್ವನ ಕತೆಯನ್ನು ಯಾರೇ ಮರೆತರೂ ಈ ಕವಿಗಾರ ಮರೆಯುವುದಿಲ್ಲ ಹಾಡಾಗಿ ಹಾಡುತ್ತಿದ್ದಾನೆ. ಸುತ್ತಮುತ್ತಿನದೆಲ್ಲ ಮೊದಲಿನ ಹಾಗೆ ಇಲ್ಲ. ಹಾಗೇ ಇದ್ದರೆ ಯಾವ ಕ್ರಾಂತಿಗಳೂ ಆಗುವುದಿಲ್ಲ. ಹೆಣ್ಣಿನಲ್ಲೂ ಬದಲಾವಣೆ ಒಳಗಿನಿಂದ ಬರಬೇಕು, ಹೊರಗಿನಿಂದಲ್ಲ. ಎಂದು ಕವಿ ಸ್ತ್ರೀ ಸಂವೇದನೆಯಿಂದ ಸಾಬವ್ವಳ ದುರಂತ ಕತೆಯನ್ನು ಹಾಡಾಗಿ ಹಾಡಿ ಮಹಿಳೆಯರನ್ನು ಪುರುಷ ಸಮಾಜದಿಂದ ಎಚ್ಚರಗೊಳ್ಳುವಂತೆ ಮಾಡಿದ್ದಾರೆ.

ಕೆ. ಬಿ. ಸಿದ್ದಯ್ಯನವರು ತಮ್ಮ ಖಂಡಕಾವ್ಯಗಳಲ್ಲಿ ಪರಂಪರೆಯ ಕುಲಪುರಾಣಗಳಿಂದ ಮಹಿಳಾ ನೆಲೆಯನ್ನು ಗುರುತಿಸುತ್ತಾರೆ. ಅವರ ಮೊದಲ ಖಂಡಕಾವ್ಯ 'ಬಕಾಲ' ಖಂಡಕಾವ್ಯದಲ್ಲಿ ಸ್ತ್ರೀ ಜಾಗೃತ ಸ್ಥಿತಿಯಲ್ಲಿದ್ದಾಳೆ. ಈ ಬಕಾಲದಲ್ಲಿ "ಮಣ್ಣಕೆಂಡದುಂಡೆ ರೂಪದನಿ ತುದಿಗಾಲ ಗಿಡಬಾಲೆ ಕುಣಿಯುತ್ತಾಳೆ". ಮಣ್ಣು ಸೃಷ್ಟಿಯ ಸಂಕೇತ ಕೆಂಡ ನಾಶದ ಸಂಕೇತ ಇವೆರಡನ್ನೂ ಉಂಡೆಯಾಗಿಸಿ ರೂಪದನಿ ಗಿಡಬಾಲೆ ರೂಪುಗೊಳ್ಳುತ್ತಾಳೆ. ಹುಟ್ಟು ಮತ್ತು ಸಾವುಗಳನ್ನು ಜೊತೆ ಜೊತೆಯಾಗಿ ತರುತ್ತಲೇ ಅವೆಲ್ಲವನ್ನೂ ತನ್ನ ಒಡಲಲ್ಲಿಟುಕೊಂಡ ಗಿಡಾಬಾಲೆ ಬಳಸಿಕೊಳ್ಳುವುದು ಮುಂದೆ ಸೃಷ್ಟಿಯ ನೆಲೆಯನ್ನು–ಕೆಂಡ ಒಳಗಿದ್ದರೂ ಒಡಲಲ್ಲಿ ಧರಿಸುತ್ತಾಳೆ. ತನ್ನ ಕುಲದ ಕೂಸು ಪಡುವ ಪಾಡಿನ ಸಂಕೇತವಾಗಿ ಕಾಣುತ್ತಾಳೆ. ಕವಿ ತನ್ನ ಕುಲದ ತ್ಯಾಗದ ರೂಪವನ್ನು ಈ ಗಿಡಾಲೆಯ ಮೂಲಕ ಕಟ್ಟಿ ಕೊಡುತ್ತಾರೆ.

ಗಿಡಬಾಲೆ ಮತ್ತೊಂದು ರೂಪದಲ್ಲಿ 'ದಕ್ಲಕಥಾದೇವಿ ಕಾವ್ಯ' ಖಂಡಕಾವ್ಯದಲ್ಲೂ ಕಾಣಿಸಿಕೊಳ್ಳುತ್ತಾಳೆ. ಸಿದ್ದಯ್ಯನವರ ಕಾವ್ಯಗಳುದ್ದಕ್ಕೂ ಪುರುಷನಿಗಿಂತ ಸ್ತ್ರೀ ಹೆಚ್ಚು ಕ್ರಿಯಾಶೀಲಳು. ಖಂಡಕಾವ್ಯದಲ್ಲಿ ಜಲದೇವಿಯೇ ಹೆಪ್ಪಾಗಿ ಭೂಮಿಯಾಗುತ್ತಾಳೆ. ಹೆಣ್ಣಿಗಿರುವ ನಿರ್ಮಾಣ ಕೌಶಲವನ್ನು ಕವಿ ತಮ್ಮ ಪರಂಪರೆಯಿಂದಲೇ ರೂಪಿಸಿಕೊಂಡಿದ್ದಾರೆ. ಗಂಡನ್ನು ಹೆಣ್ಣಾಗಿಸುವ ಮೂಲಕ ಸ್ತ್ರೀಪರ ಧೋರಣೆಯನ್ನು ಕಾಣಬಹುದು. ದಕ್ಲ 'ಒಂದುಸಲ ಹೆಣ್ಣಾದ ಮೇಲೆ ಇನ್ನಾವ ರೂಪ ಐತೆ ತಾಯಿ' ಎನ್ನುವ ಮಾತು ಸಾಂಪ್ರದಾಯಿಕ ಶಿಷ್ಟಪರಂಪರೆಗೆ ಕೊಡುವ ದೊಡ್ಡ ಹೊಡೆತ. ಶಿಷ್ಟಪರಂಪರೆಗಳಲ್ಲಿ ಹೆಣ್ಣಾಗಿ ಜನಿಸುವುದರ ಹಿಂದೆ ಮಾಡಿದ ಪಾಪಕರ್ಮಗಳಿಂದ ಎಂಬ ನಂಬುಗೆ ಇದೆ. ಹೆಣ್ಣಾಗಿ ಹುಟ್ಟಿದ್ದೇ ತನ್ನ ಮಹಾಪಾಪ ಎಂದೇ ಭಾವಿಸುವಂತಿವೆ. ಆದರೆ ಸಿದ್ದಯ್ಯನವರು ಆ ಸಾಂಪ್ರದಾಯಿಕ ದೃಷ್ಟಿಕೋನವನ್ನು ಪೂರ್ಣವಾಗಿ ನಿರಾಕರಿಸಿ ಹೆಣ್ಣು ರೂಪವೇ ಆತ್ಯಂತಿಕ ಸ್ಥಿತಿ ಎಂದು ಕಟ್ಟುತ್ತಾರೆ. ಹೆಣ್ಣು ಎಲ್ಲ ಆಧ್ಯಾತ್ಮಿಕ ಮೋಕ್ಷದ ಸ್ಥಿತಿಗೆ ಜೀವಧಾತು ಎಂಬ ನಿಲುವು ತಾಳುತ್ತಾರೆ.

'ಅನಾತ್ಮ' ಖಂಡಕಾವ್ಯದಲ್ಲಿ ಹೆಣ್ಣಿನ ಸಂಕಟಗಳನ್ನು ಸಮಕಾಲೀನಗೊಳಿಸುತ್ತಾರೆ. ಸೂಳೆಯ ಸಾವು ಸಾಮಾನ್ಯರಿಗೆ ಏನೇನೂ ಅಲ್ಲ. ಆದರೆ ಊರಸೂಳೆ ಸಾಮಾನ್ಯವಾದವಳಂತೂ ಅಲ್ಲ. ಆದರೆ ಬಹುಪಾಲು ಸಾಮಾಜಿಕ ವ್ಯವಸ್ಥೆಯಲ್ಲಿ ಆಕೆಯನ್ನು ಹೀಗಳೆದು ನಿರಾಕರಿಸಲಾಗಿದೆ. ಹಾಗಾಗಿಯೇ ಅವಳ ಸಾವು ಮುಖ್ಯವಾಗುವುದಿಲ್ಲ. "ಆಕೆ ಸಾಮಾಜಿಕವಾಗಿ ದೂರವಿದ್ದರೂ ಸಾಕಷ್ಟು ಉತ್ತಮ ಕೆಲಸಗಳನ್ನು ಮಾಡಿರುವ ಉದಾಹರಣೆಗಳು ನಮ್ಮ ಮುಂದಿವೆ. ಸೂಳೆಕೆರೆ, ಸೂಳೆಕಟ್ಟೆ, ಸೂಳೆಬೆಟ್ಟ ಎಂಬ ಹೆಸರುಗಳು ಜನಮಾನಸದಲ್ಲಿ ಇಂದಿಗೂ ಉಳಿದುಬಂದಿವೆ. ಸೂಳೆ ಎಂಬುದು ಹೆಣ್ಣನ್ನು ಅತ್ಯಂತ ಹೀಗಳೆದಿರುವ ಪದ. ಆ ಪದದ ಮೂಲಕವೇ ಅಂತಃಕರಣವನ್ನು ಸಾಧಿಸಲು ಯತ್ನಿಸಿದ್ದಾರೆ ಕವಿ. ಯಾವುದು ಸಮಾಜದಲ್ಲಿ ಹೀನಾಯಗೊಂಡಿದೆಯೋ, ಅಮಾನ್ಯಗೊಂಡು ನಿರ್ಲಕ್ಷ್ಯಕ್ಕೊಳಗಾಗಿದೆಯೋ ಸಿದ್ದಯ್ಯನವರು ಅಲ್ಲಿಂದಲೇ ಶುರುಮಾಡುತ್ತಾರೆ" (ಕಣ್ಣು ಧರಿಸಿ ಕಾಣಿರೊ. ರವಿಕುಮಾರ್ ನೀಹ)

ಎಸ್. ಜಿ. ಸಿದ್ದರಾಮಯ್ಯನವರು ಬರೆದಿರುವ 'ಬಿಜ್ಜಳನ್ಯಾಯ' ಖಂಡಕಾವ್ಯ ವಿಶಿಷ್ಟವಾಗಿದೆ. ಬಿಜ್ಜಳನ ಅಧಿಕಾರಾವಧಿಯಲ್ಲಿ ಸಾಮಾನ್ಯ ಪ್ರಜೆಗೂ ಸಣ್ಣ ಪ್ರಮಾಣದ ಅನ್ಯಾಯವಾಗಲೂ ಬಿಡುವುದಿಲ್ಲ. ಬಿಜ್ಜಳನು ಮಾರುವೇಷದಲ್ಲಿ ನಗರಪ್ರದಕ್ಷಿಣೆ ಹಾಕುವಾಗ ಹೆಣ್ಣಿನ ಆರ್ತಧ್ವನಿಯಮ್ಮು ಮೂರು ದಿನದಿಂದ ಗಮನಿಸಿದ್ದನು. ಕಾವಲುಗಾರ ಆ ಹೆಣ್ಣನ್ನು ಕಳ್ಳಿಯೆಂದು ಹಿಡಿದಾಗ ಮಾರುವೇಷದಲ್ಲಿದ್ದ ಬಿಜ್ಜಳನು ಪ್ರತ್ಯಕ್ಷ

ಕಂಡರೂ ಪ್ರಮಾಣಿಸಿ ನೋಡುವುದು ಧರ್ಮ'ವೆಂದು ಕಾವಲಿನವನಿಗೆ ತಿಳಿಸಿ ಆಕೆಗೆ ಎಚ್ಚರಿಕೆಯ ರಕ್ಷಣೆ ನೀಡಬೇಕೆಂದನು. ಮುಂಜಾನೆ ಸಭೆಯನ್ನು ಕರೆಸಿದನು. ಮಹಿಳೆಯ ಅಹವಾಲು ಶುರುವಾಯಿತು. 'ನನ್ನ ಕಂದನನ್ನು ನನಗೆ ಕೊಡಿಸಿ, ದೊರೆಯೇ ನನ್ನ ಸಂಸಾರ ನನ್ನದಾಗಿಸಿ ನನ್ನೆದೆಯ ಭಾರವನ್ನು ಇಳಿಸಿ' ಕರುಳಾಳದ ಬೇಡಿಕೆಯನ್ನಿತ್ತಳು. ಅವಳ ಮನೆಯ ಸರ್ವರನ್ನು ಕರೆಸಿದನು. ನೆರೆದ ಜನತೆ ನಿಬ್ಬೆರಗಿನಿಂದ ನೋಡಿದರು. ನ್ಯಾಯ ಕೇಳಲು ಬಂದಂತಹ ಹೆಣ್ಣಿನಂತೆ ಮತ್ತೊಬ್ಬಳು ಮಗುವನ್ನು ಎದೆಗವುಚಿಕೊಂಡು ಬಂದಳು. ಅದೇ ಹೆಣ್ಣು, ಇದೇ ಹೆಣ್ಣು. ಅದು ಛಾಯೆಯೋ ಇದು ಮಾಯೆಯೋ ಒಂದಿನಿತೂ ಭಿನ್ನತೆಯಿಲ್ಲ. ನ್ಯಾಯ ಕೇಳಲು ನ್ಯಾಯಪೀಠದ ಬಳಿ ನಿಂತಿದ್ದವಳು ಮಗುವನ್ನು ಕಂಡ ತಕ್ಷಣ ಬಳಿಗೆ ಓಡಿದಳು. ರಾಜ ಬಿಜ್ಜಳನು ಕುಟುಂಬವನ್ನೊಮ್ಮೆ ನಿಬ್ಬೆರಗಿನಿಂದ ನೋಡಿದನು. ಮಗುವನ್ನು ಎದೆಗವುಚಿಕೊಂಡ ಹೆಣ್ಣನ್ನೊಮ್ಮೆ, ನ್ಯಾಯ ಕೇಳಲು ನಿಂತಿದ್ದವಳನ್ನೊಮ್ಮೆ ನೋಡಿದ ದೊರೆ ದಿಗ್ಭ್ರಾಂತನಾದನು.

ಆ ದುಃಖಿತ ಹೆಣ್ಣು 'ನ್ಯಾಯಪೀಠಕ್ಕೆ ಕಣ್ಣು ಇದ್ದರೆ ಒಳಗಣ್ಣು ಇದ್ದರೆ ನನಗೆ ನ್ಯಾಯ ನೀಡಲಿ, ಕಂದನಿಗೆ ಅಮ್ಮನನ್ನು ದೊರಕಿಸಲಿ' ಆರ್ಭಟಿಸಿ ನುಡಿದಳು. ದೊರೆಗೆ ಕುದಿನೀರು ಎರಚಿದಂತಾಯಿತು. 'ಕನಲಬೇಡ ತಾಯಿ ಘಟನೆಯನ್ನು ವಿವರವಾಗಿ ಹೇಳು' ಎಂದನು. 'ಒಂದು ಮದ್ಯಾಹ್ನ ಮನೆಯ ಕೆಲಸ ಮುಗಿಸಿ ಮಲಗಿರುವ ಕಂದನ ಬಳಿಗೆ ಬಂದೆನು. ಅಲ್ಲಿ ನೋಡಲು ನನ್ನ ಕಂದನ ಬಳಿ ಅವಳಿದ್ದಳು. ಅವಳೇ ನಾನಾಗಿದ್ದಳು. ನನ್ನ ಅಳಲಿಗೆ ನೆರೆಯವರು ಯಾರೂ ಬರಲಿಲ್ಲ. ಅತ್ತೆ ಮಾವನವರಿಗೆ ನಡೆದ ಸಂಗತಿ ತಿಳಿಸಿದೆ ಆದರೆ ಅವಳ ವಿನಯಕ್ಕೆ, ಮರುಳಾಗಿದ್ದಾರೆ. ನನ್ನನ್ನೇ ಶಂಕೆಯಿಂದ ನೋಡಿದರು. ಸಟೆಯೆಂದು ನನ್ನನ್ನು ಆಚೆ ತಳ್ಳಿದರು.. ನನ್ನ ಜನರೇ ನನ್ನ ಅರಿಯರು. ನನ್ನ ಅಳುವನ್ನು ಯಾರೂ ಕೇಳರು. ಎಂದು ಬಿಕ್ಕಿ ಅತ್ತಳು. ಮತ್ತೊಂದು ಕಡೆ ಮಗುವನ್ನು ಎತ್ತಿಕೊಂಡು ನಿಂತಿರುವ ಮರುಳಹೆಣ್ಣು ಅವಳ ವಿನಯ, ಮಗುವನ್ನು ಸಂತೈಸುವ ರೀತಿಯನ್ನು ಕಣ್ಣಾರೆ ಕಂಡ ಅತ್ತೆ ಮಾವ ಮತ್ತು ಗಂಡ ಇವಳೇ ನಮ್ಮ ಸೊಸೆ ಎಂದು ಒಕ್ಕೊರಲಿನಿಂದ ನುಡಿದರು. ಬಿಜ್ಜಳನು ಮರುಳ ಹೆಣ್ಣಿನ ಕಡೆಗೊಮ್ಮೆ, ನ್ಯಾಯ ಕೇಳಲು ನಿಂತಿರುವ ಹೆಣ್ಣಿನ ಕಡೆಗೊಮ್ಮೆ ನೋಡಿದನು. ಅವಳ ಕುಟುಂಬವು ಭಾವ ಭ್ರಾಂತಿಯಲ್ಲಿರುವುದನ್ನು ಅರಿತನು. ರಾಜನ ಆಜ್ಞೆಯಂತೆ ಭಟರು ನ್ಯಾಯ ಪೀಠದ ಎದರು ದಿಬ್ಯಗಂಬ ನಿಲ್ಲಿಸಿದರು. ದಿಬ್ಯಗಂಬದ ಪರೀಕ್ಷೆಯಲ್ಲಿ ಮಗುವನ್ನು ಎತ್ತಿಕೊಂಡು ನಿಂತಿದ್ದವಳು ಮರುಳು ಹೆಣ್ಣೆಂದು ತೀರ್ಮಾನಿಸಲಾಯಿತು. ನಿಜವಾದ ತಾಯಿ ಮದ್ಯರಾತ್ರಿಯಲ್ಲಿ ಕಾವಲುಗಾರನಿಗೆ ಸಿಕ್ಕಿದ್ದವಳು ಎಂದು ಎಲ್ಲರಿಗೂ ತಿಳಿಯಿತು. ನಿಜ ತಾಯಿಯ ಕರುಳಾಳದ ಅಂತಃಕರಣ, ಮಾತೃವಾತ್ಸಲ್ಯ ಎದ್ದು ಕಾಣುತ್ತದೆ. ಬಿಜ್ಜಳನ ಅಂತಃಕರಣದ ಕಣ್ಣು ತೆರೆಯಿತು ನಿಜವಾದ ತಾಯಿಗೆ ನ್ಯಾಯ ಸಿಕ್ಕಿತು.

ಅರವಿಂದ ಮಾಲಗತ್ತಿಯವರು ಬರೆದಿರುವ 'ಶ್ರೀಚಂಡಾಲಸ್ವರ್ಗಾರೋಹಣಂ' ಖಂಡಕಾವ್ಯ. ಪೌರಾಣಿಕ ಹಿನ್ನೆಲೆ ಹೊಂದಿದೆ. ತನ್ನ ತಂದೆಯ ಮಾತಿನಂತೆ ಮನೆಯನ್ನು ಬಿಟ್ಟು ಹೋಗುತ್ತಿದ್ದ ಸತ್ಯವ್ರತನಿಗೆ ಕನ್ಯೆಯೊಬ್ಬಳು ಕಂಡಳು. ಆ ಚಹರೆಯವಳನ್ನು ಹಿಂದೆ ಕಾಡಿನಲ್ಲಿ ನೋಡಿದ್ದು ತನ್ನನ್ನು ವಿವಾಹವಾಗೆಂದು ಕೇಳಿಕೊಂಡಿದ್ದನು. ಆಕೆ ತನ್ನ ಹೆತ್ತವರ ಒಪ್ಪಿಗೆ ಪಡೆಯಿರಿ ಎಂದು ಹೇಳಿಹೋಗಿದ್ದಳು. ಅದೇ ಕನ್ಯೆ ಇವಳು. ಅವಳು ಮಾತಂಗನ ಮಗಳು ಮಾತಂಗಿಯೆಂದು ತಿಳಿಯಿತು. ಮಾತಂಗ ಹೇಳಿದಂತೆ ಪರೀಕ್ಷೆಗಳನ್ನು

ಗೆದ್ದನು. ಮಾತಂಗಿಗೆ ಸತ್ಯವ್ರತನು ಚಂದ್ರಕಾಳಿ ಸೀರೆ ಕುಪ್ಪಸವನ್ನು ತಂದುಕೊಟ್ಟಿದ್ದನು. ಮಾತಂಗಿ ಮುದಿ ರಾಜನೊಬ್ಬನೊಂದಿಗೆ ವಿವಾಹವಾಗುವಾಗ ತಡೆದಿದ್ದನು, ಯುದ್ದಕ್ಕೆ ಮೀಸಲಾದ ಮಾಂಸವನ್ನು ಸೇವಿಸಿದ್ದನು. ಅವನ ತಂದೆ ನೀನು ಪಾಪಕರ್ಮಗಳನ್ನು ಮಾಡಿರುವುದರಿಂದ ಚಂಡಾಲನಾಗು ಎಂದು ಹೊಲಗೇರಿಗೆ ಅಟ್ಟಿದನು. ಸತ್ಯವ್ರತನು ಮಾದಿಗರ ಹೆಣ್ಣನ್ನು ಮದುವೆಯಾದನು, ಆದುದರಿಂದ ಬರಗಾಲ ಬಂದಿದೆ ಎಂಬ ಹುಯಿಲೆದ್ದಿತು. ಸತ್ಯವ್ರತನ ತಂದೆಗೆ ಕೊಟ್ಟಿದ್ದ ಮಾತಿನಂತೆ ವಶಿಷ್ಠ ಮಹರ್ಷಿ ಸತ್ಯವ್ರತನಿಗೆ ಪಟ್ಟಾಭಿಷೇಕ ನೆರವೇರಿಸಿದನು. ತಾನು ಸಶರೀರಿಯಾಗಿ ಸ್ವರ್ಗ ಸೇರುವ ಬಯಕೆಯನ್ನು ತಿಳಿಸಿದಾಗ ಶಾಪವಿತ್ತನು. ಶಾಪವನ್ನು ತಿರಸ್ಕರಿಸಿ ಚಾಂಡಾಲನಾಗಿ ಹೊಲಗೇರಿಗೆ ಬಂದನು. ಮಾತಂಗಿಗೆ ತನ್ನ ಅಭಿಲಾಷೆಯನ್ನು ತಿಳಿಸಿದನು. ಅಲ್ಲದೆ ಸಶರೀರ ಸ್ವರ್ಗವನ್ನು ಏರಬೇಕಾದರೆ ಚಾಂಡಾಲತನವನ್ನು ಕಳೆಯಬೇಕೆಂದು ವಿಶ್ವಾಮಿತ್ರನು ನುಡಿದಾಗ ಸತ್ಯವ್ರತ ಒಪ್ಪಲಿಲ್ಲ. ಕೊನೆಗೆ ತನ್ನ ಕಷ್ಟ ಕಾಲದಲ್ಲಿ ತನ್ನ ಮಡದಿಗೆ ಮಾಡಿದ್ದ ಉಪಕಾರವನ್ನು ನೆನೆದು ಸಶರೀರ ಸ್ವರ್ಗ ಏರಲು ಅನುಮತಿಸಿನು. ಇದನ್ನು ದೇವತೆಗಳು ಕುತೂಹಲದಿಂದ ನೋಡಿದರು. ಚಾಂಡಾಲನಿಂದಾಗಿ ಸ್ವರ್ಗ ನರಕವಾಗುತ್ತಿದೆ ಎಂದು ಹೇಳಲು, ಇಂದ್ರನು ತನ್ನ ಕೋಲಿನಿಂದ ಸತ್ಯವ್ರತನನ್ನು ತಿವಿದನು. ಅದು ವಜ್ರದಂಡವಾಯಿತು. ಕೋಲಿನ ಸ್ಪರ್ಶದಿಂದ ಸತ್ಯವ್ರತ ಕೆಳಗಡೆ ಬೀಳಲಾರಂಭಿಸಿದನು. ಕ್ಷಣಾರ್ಧದಲ್ಲಿ ಸಾಧ್ವಿ ಮಾತಂಗಿ ನೀಡಿದ ಕಲಾನಿಧಿ ಕೌದಿಯ ಮಹಾಶಕ್ತಿಯಿಂದ ಪಾದದಡಿಯೂ ಸ್ವರ್ಗವಾಯಿತು. ಹೀಗೆ ಮಾತಂಗಿಯ ಮಹತ್ವ ಹಾಗೂ ಸಮಾನತೆಯ ತತ್ವ ಈ ಖಂಡಕಾವ್ಯದಲ್ಲಿ ಮೂಡಿಬಂದಿದೆ.

ಎಲ್ ಹನುಮಂತಯ್ಯನವರ ಖಂಡಕಾವ್ಯ 'ಬೇರಾದ ರುಂಡ' ಭೂಮಿತಾಯಿ ಹೆಣ್ಣಾಗಿ ತಾನು ಸೃಷ್ಟಿಸಿದ ಪ್ರಾಣಿಗಳನ್ನು ಸಲಹುವ ಜವಾಬ್ದಾರಿ ಹೊತ್ತಿದ್ದಾಳೆ. ಅಲ್ಲದೆ ಶತಮಾನಗಳಿಂದ ಸಮಾಜದ ಕಣ್ಣಿಗೆ ಕಡೆಯಾದವರ ಬಗ್ಗೆ ಮಮತೆಯುಳ್ಳವಳಾಗಿದ್ದಾಳೆ. ಸಂಪ್ರದಾಯದ ಕಟ್ಟು ಕಟ್ಟಳೆಗಳಲ್ಲಿ ಬಿದ್ದು ತೊಳಲಾಡುವವರನ್ನು ಹಾಗೂ ಹಸಿವಿನಿಂದ ನರಳುವವರಿಗೆ ಆ ಕೂಪದಿಂದ ಹೊರತರಲು ಪ್ರಯತ್ನಿಸುವ ಆಶಾದಾಯಕವಾದ ಮಾನವ ಪ್ರೀತಿಯಿದೆ. ಹಾಗೆಯೇ ತಾಯಿ ಕರುಣೆ ಪ್ರೀತಿಗೆ ಹೆಸರಾದವಳು. ತನ್ನವರಿಗಾಗಿ ತನ್ನನ್ನೇ ತೇದುಕೊಂಡವಳು. ಇಲ್ಲಿ ಭೂಮಿತಾಯಿ ತಾನು ಸೃಷ್ಟಿಸಿದ ಪ್ರತಿಯೊಂದು ಜೀವರಾಶಿಯನ್ನು ಪೊರೆಯುವಂತೆ ಹೆತ್ತತಾಯಿ ಮಕ್ಕಳನ್ನು ಪೊರೆಯುವ ಎರಡೂ ತಾಯ್ತನದ ಸಮೀಕರಣವನ್ನು ಈ ಖಂಡಕಾವ್ಯದಲ್ಲಿ ಕಾಣಹುದು. ತಾಯಿಯ ಮೂಲಕ ಬಹುಸಂಖ್ಯಾತರ ದನಿಯಾದ ಸಾಮಾಜಿಕ ನ್ಯಾಯವನ್ನು ಪಡೆಯುವ ಆದ್ಯತೆಯನ್ನು ಈ ಖಂಡಕಾವ್ಯ ಶೋಧಿಸುತ್ತದೆ.

ವಡ್ಡಗೆರೆ ನಾಗರಾಜಯ್ಯನವರ 'ಆಸಾದಿ' ಖಂಡಕಾವ್ಯ ಪ್ರಮುಖವಾಗಿ ಮಹಿಳಾ ನೆಲೆಯಲ್ಲಿ ರಚನೆಗೊಂಡಿದೆ. ಜನಪದ ಕಾವ್ಯದಲ್ಲಿ ಮುಖ್ಯವಾಗಿ ಕಂಡುಬರುವ ಶ್ರೀಬಾಲಗೌರಿಯ ಕಥನವನ್ನಿಟ್ಟು ಕೊಂಡು ವಿನೂತನವಾಗಿ ರಚಿಸಿದ್ದಾರೆ. ಮೇಲ್ಜಾತಿಯ ಶ್ರೀಬಾಲಗೌರಿಯು ಕೆಳಜಾತಿಯ ಮಾದಿಗ ಗಂಡನಿಂದ ಐವರು ಗಂಡುಮಕ್ಕಳನ್ನು ಪಡೆದಿರುತ್ತಾಳೆ. ಕಾಲಾನಂತರ ಗಂಡನ ತಾಯಿಯಿಂದ ಜಾತಿ ತಿಳಿದು ಗಂಡ, ಅತ್ತೆ, ಮಾವ ಮತ್ತು ಮಕ್ಕಳಿಗೆ ಶಾಪವಿಕ್ಕುತ್ತಾಳೆ. ಮುಂದೆ ಅವಳು ಮಾರಿದೇವತೆಯಾಗಿ ಅವತರಿಸಿ ಗಂಡ ಮತ್ತು ನಾಲ್ಕು ಮಕ್ಕಳನ್ನು ಬಲಿಪಡೆದುಕೊಳ್ಳುತ್ತಾಳೆ. ಕೊನೆಯ ಮಗನ ಬಗೆಗೆ ಆಸೆ ಇದ್ದುದರಿಂದ ಲೋಕದಲ್ಲಿ ತನ್ನನ್ನು ಹಾಡುತ್ತಾ, ಹೆಸರು ಹೇಳುತ್ತಾ ತನ್ನ ಎದೆಯ ಮೇಗಳ ಕೂಳು ತಿನ್ನುತ್ತಾ ಭಿಕ್ಷೆ

ಬೇಡುತ್ತಾ ಬದುಕು ಹೋಗು ಎನ್ನುತ್ತಾಳೆ. ಇವನೇ ಆಸಾದಿ. ಇಲ್ಲಿ ಕದುರನ ತಾಯಿ ಕೆಳಸಂಸ್ಕೃತಿಯನ್ನು ಪ್ರತಿನಿಧಿಸಿ ಮುಂದಿನ ಕೃತ್ಯಕ್ಕೆ ಕಾರಣಳಾದರೆ, ಶ್ರೀಬಾಲಗೌರಿಯು ಮೇಲ್ಜಾತಿಯನ್ನು ಪ್ರತಿನಿಧಿಸುತ್ತಾಳೆ. ಕೆಳಜಾತಿಯವರು ಜಾತಿಯನ್ನು ಮರೆಮಾಚಿ ಮದುವೆಯಾದರೆ ಎಂತಹ ದುರಂತ ಘಟನೆಗಳಿಗೆ ಕಾರಣವಾಗುತ್ತದೆ ಎಂಬುದು ಈ ಕಾವ್ಯದ ಮುಖ್ಯ ಭೂಮಿಕೆಯಾಗಿದೆ.

ಚೀಮನಹಳ್ಳಿ ರಮೇಶ್‌ಬಾಬು ರವರ 'ನಾಗ್ದಾಳೆ' ಪರಂಪರೆಯ ಬದುಕನ್ನು ಕಟ್ಟಿಕೊಟ್ಟಿರುವ ಒಂದು ವಿಶಿಷ್ಟ ಖಂಡಕಾವ್ಯ. ಸಾಮಾನ್ಯ ಬದುಕಿನ ಕಲ್ಲವ್ವ ತನ್ನ ಗಂಡನಿಂದಲೇ ಅವಮಾನ ಮತ್ತು ಹಿಂಸೆಗೆ ಗುರಿಯಾಗುವುದು, ಹಾಗೆಯೇ ಅವನ ವಿರುದ್ಧ ಸೆಟೆದು ನಿಲ್ಲುವುದು, ಸಾಮಾಜಿಕ ಹಿಂಸೆಗೆ ಒಳಗಾಗುವುದು ಮತ್ತು ನಾಗ್ದಾಳೆಯ ಬುಡದಲ್ಲಿ ಅಚೇತನಗೊಳ್ಳುವುದು ಒಂದು ಹಂತದ ಘಟನೆ. ಈ ಕಲ್ಲವ್ವನ ಕತೆ ಹಿನ್ನೆಲೆಯ ನಿರೂಪಣೆಯಾಗಿ ನಾಗ್ದಾಳೆ ಕತೆ ಮುಂದುವರಿಯುತ್ತದೆ. ಇದರ ಕಥನ ಕ್ರಮದಲ್ಲಿ ಕಲ್ಲವ್ವನ ಬದುಕು ಮತ್ತು ಒಳಹೊರ ಘಟನೆಗಳು ಬಿಚ್ಚಿಕೊಳ್ಳುತ್ತವೆ. ಇದರಲ್ಲಿ ಅಮಾನವೀಯ ದಾರುಣ ದೃಶ್ಯಗಳು ಅನಾವರಣಗೊಳ್ಳುತ್ತವೆ. ಕಲ್ಲವ್ವ ಗಂಗವ್ವನಾಗಿ ಚೈತನ್ಯಗೊಳ್ಳುವುದು ಅವಳಿಗೆ ಬೆಂಬಲವಾಗಿ ಮತ್ತು ಪ್ರೋತ್ಸಾಹದಾಯಕವಾಗಿ ಪರಿಸರ ಮತ್ತು ಜೀವಗಳು ನಿಲ್ಲುವುದು ಸಹಜ ವಿಶಿಷ್ಟ ಕ್ರಿಯೆಯಾಗಿದೆ. ಇಲ್ಲಿನ ಕ್ರಿಯೆ ಕ್ರಾಂತಿಕಾರಕವಾದುದು ಆಗುತ್ತದೆ. ಹೇಗೆಂದರೆ ಗಂಗವ್ವನಾಗುವ ಕಲ್ಲವ್ವ ನಾಗದಾಳೆಯಾಗಿ ರೂಪಾಂತರಗೊಳ್ಳುತ್ತಾಳೆ ಮತ್ತು ಆಯುಧ ಧರಿಸಿದವಳಾಗುತ್ತಾಳೆ.

ನಾಗದಾಳೆಯ ರೂಪ ಸ್ವಯಂ ರಕ್ಷಣೆಯದ್ದಾಗಿದ್ದರೆ ಆಯುಧ ಧರಿಸುವುದು ಸ್ವಯಂ ಮತ್ತು ಪರರ ರಕ್ಷಣೆಗಾಗಿ ಆಗಿರುತ್ತದೆ. ಈ ಹಂತದಲ್ಲಿ ಆಗುವ ಪ್ರಮುಖ ಬೆಳವಣಿಗೆಯೆಂದರೆ ಊರ ಹೊರಗೆ ನಡೆಯುತ್ತಿದ್ದ ಬಲಿಹಾರ ಅವಳು ಊರ ಮಧ್ಯೆ ನಿಂತಾಗ ಅದು ಊರ ನಡುವಿನ ಆಚರಣೆಯಾಗುತ್ತದೆ. ಅಂದರೆ ಬಹಿಷ್ಕೃತವು ಸ್ವೀಕೃತಕ್ಕೆ ಬರುವ ಚಲನೆ ಮತ್ತು ಪರಿವರ್ತನೆಯನ್ನು ಇಲ್ಲಿ ಕಾಣುತ್ತೇವೆ. ಈ ನಿಟ್ಟಿನಲ್ಲಿ ಈ ಖಂಡಕಾವ್ಯ ಮಹಿಳಾ ಪ್ರಧಾನ ನೆಲೆಯಲ್ಲಿ ಪ್ರಮುಖವಾದುದಾಗಿದೆ. ಕಾವ್ಯದ ಆರಂಭದಲ್ಲಿ ನಿಸ್ತೇಜವಾಗಿ ಆದರೆ ನೋವುಗಳನ್ನು ತುಂಬಿಕೊಂಡ ಪಾತ್ರಗಳು ಅವಸಾನಗೊಳ್ಳದೆ ಚೈತನ್ಯಶಾಲಿಗಳಾಗುತ್ತಾ ಹೋಗುವುದು, ಅದಕ್ಕೆ ಪೂರಕವಾಗಿ ಪರಿಸರ ಮತ್ತು ಪ್ರಕೃತಿ ಸಚೇತನವಾಗಿ ನಿಲ್ಲುವುದು ಒಂದು ಸಾಮಾಜಿಕ ಹಾಗೂ ಅದರದೇ ಸಂಸ್ಕೃತಿಯ ಕ್ರಿಯೆಯಾಗಿ ಪರಿಣಮಿಸುತ್ತದೆ.

ಹೀಗೆ ಪ್ರತಿಯೊಂದು ಖಂಡಕಾವ್ಯವೂ ಮುಖ್ಯ ಭೂಮಿಕೆಯಲ್ಲಿ ಮಹಿಳಾ ನೆಲೆಗಟ್ಟನ್ನು ಹೊಂದಿವೆ ಆ ಮೂಲಕ ಪುರಾಣ ಕಾಲದಿಂದ ವರ್ತಮಾನದವರೆಗೆ ಸ್ತ್ರೀಯರ ಬದುಕಿನಲ್ಲಾದ ಅನೇಕ ಪಲ್ಲಟಗಳನ್ನು ಸಮಕಾಲೀನ ಸಂಗತಿಗಳೊಂದಿಗೆ ಅನುಸಂಧಾನ ಮಾಡಲು, ಆ ಮೂಲಕ ವಾಸ್ತವವನ್ನು ತಿಳಿಯಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2003). ಶ್ರೀಚಂಡಾಲ ಸ್ವರ್ಗಾರೋಹಣಂ. ಅಭಿರುಚಿ ಪ್ರಕಾಶನ, ಮೈಸೂರು.
- ಚನ್ನಣ್ಣ ವಾಲಿಕಾರ. (2003). ಹಾಡಕ್ಕಿ. ದಲಿತ/ಬಂಡಾಯ ಸಾಹಿತ್ಯ ಪ್ರಕಾಶನ, ಗುಲ್ಬರ್ಗ.

- ಚೀಮನಹಳ್ಳಿ ರಮೇಶ್‌ಬಾಬು. (2018). ನಾಗ್ದಾಳೆ, ಅನಿಮ ಪುಸ್ತಕ, ಚಿಂತಾಮಣಿ.
- ಹನುಮಂತಯ್ಯ ಎಲ್. (2019). ಬೇರಾದರುಂಡ ಸಮಗ್ರಕಾವ್ಯ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸಿದ್ದಯ್ಯ ಕೆ. ಬಿ. (2018). ಸಮಗ್ರ ಖಂಡಕಾವ್ಯಗಳು. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸಿದ್ದರಾಮಯ್ಯ ಎಸ್. ಜಿ. (2020). ಬಿಜ್ಜಳನ್ಯಾಯ ಮತ್ತು ಇತರ ಖಂಡಕಾವ್ಯಗಳು. ಅನುಗ್ರಹ ಪ್ರಕಾಶನ. ಬೆಂಗಳೂರು.